## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 31 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 04-07-2023 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು. |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೆಲವು ಕಾನೂನು ಬಾಹಿರ ನಡವಳಿಕೆಗಳ ಸಂಬಂಧ ಸರ್ಕಾರದಿಂದ ತನಿಖೆಗೆ ಆದೇಶ ನೀಡಲಾಗಿದೆಯೇ; | ಹೌದು<br>ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಹಲವು ವಿಷಯಗಳ ಬಗ್ಗೆ ಸರ್ಕಾರದಲ್ಲಿ ಸ್ವೀಕೃತವಾಗಿರುವ ದೂರು/ ಆರೋಪಗಳ ತನಿಖೆಯನ್ನು ನಡೆಸಿ ವರದಿಯನ್ನು ನೀಡಲು ಸರ್ಕಾರದ ಆದೇಶ ಸಂಖ್ಯೆ: ನಅಇ 308 ಮೈಅಪ್ರಾ 2021 ದಿನಾಂಕ: 02.07.2022 ಹಾಗೂ ತಿದ್ದುಪಡಿ ಆದೇಶ ದಿನಾಂಕ: 11.08.2022 ಮತ್ತು 25.08.2022 ರನ್ವಯ ತಾಂತ್ರಿಕ ಸಮಿತಿಯನ್ನು ರಚಿಸಿ ಆದೇಶಿಸಿದೆ. |
| (ಆ) | ಹಾಗಿದ್ದಲ್ಲಿ, ಯಾವ ಯಾವ ವಿಷಯಗಳ ಸಂಬಂಧ ತನಿಖೆಗೆ ಆದೇಶಿಸಲಾಗಿದೆ; ತನಿಖೆ ಯಾವ ಹಂತದಲ್ಲಿದೆ; (ಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು) | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅನುದಾನ ದುರ್ಬಳಕೆ, ಬದಲಿ ನಿವೇಶನಗಳ ಹಂಚಿಕೆ, ಭೂಸ್ವಾಧೀನ ಪರಿಹಾರ, ಪ್ರಾಧಿಕಾರದ ಸಭೆಯಲ್ಲಿ ಕಾಯ್ದೆ/ನಿಯಮ/ವಲಯ ನಿಯಮಗಳಿಗೆ ವಿರುದ್ಧವಾಗಿ ವಿಷಯಗಳನ್ನು ಮಂಡಿಸಿ ನಿರ್ಣಯ ಕೈಗೊಂಡಿರುವುದು, ಕಡತಗಳಲ್ಲಿನ ಅವ್ಯವಹಾರ ನಡೆಸಿರುವ ಬಗ್ಗೆ ಮೇಲಿಂದ ಮೇಲೆ ಸಾರ್ವಜನಿಕರಿಂದ ಮತ್ತು ಸಂಘ ಸಂಸ್ಥೆಗಳಿಂದ ಹಲವು ದೂರುಗಳು/ಆರೋಪಗಳು ಹಾಗೂ ಪ್ರಾಧಿಕಾರದ ಅಧ್ಯಕ್ಷರ ವಿರುದ್ಧ ಆಯುಕ್ತರು ಮತ್ತು ಆಯುಕ್ತರ ವಿರುದ್ಧ ಪ್ರಾಧಿಕಾರದ ಅಧ್ಯಕ್ಷರು ಪರಸ್ಪರ ಆರೋಪಿಸಿ ಸಲ್ಲಿಸಿರುವ ದೂರುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ಅಂಶವಾರು ಸಮಗ್ರ ವರದಿಯನ್ನು ಸಲ್ಲಿಸಲು ತಾಂತ್ರಿಕ ಸಮಿತಿಗೆ ಸೂಚಿಸಲಾಗಿದೆ.<br><br>ಪ್ರಸ್ತುತ ತನಿಖೆಯು ಸಮಿತಿಯ ಪರಿಶೀಲನಾ ಹಂತದಲ್ಲಿರುತ್ತದೆ. |
| (ಇ) | ತನಿಖೆ ಪೂರ್ಣಗೊಂಡಿದ್ದಲ್ಲಿ ತನಿಖೆಯ ಪೂರ್ಣ ವಿವರಗಳನ್ನು ಒದಗಿಸುವುದು? | ಉದ್ಭವಿಸುವುದಿಲ್ಲ. |

ಸಂಖ್ಯೆ: ನಅಇ 181 ಮೈಅಪ್ರಾ 2023 (ಇ)

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು